ಸಾಮಾಜಿಕ ವಿಘಟನೆಯ ವಿದ್ಯಮಾನಗಳ ಕಾರಣದಿಂದಾಗಿ ಕರ್ನಾಟಕದ ಕರಾವಳಿ ಇತ್ತೀಚಿನ ದಿನಗಳಲ್ಲಿ ಸುದ್ದಿಯಲ್ಲಿರುವುದು ಹೆಚ್ಚು. ಸಮಾನತೆ–ಸೌಹಾರ್ದವನ್ನು ಹಂಬಲಿಸಿದ ಕುದ್ಮುಲ್ ರಂಗರಾವ್‌ರಂಥ ಮಹಾನ್ ಚೇತನದ ಪ್ರಯೋಗಶಾಲೆಯಾಗಿದ್ದ ಕರಾವಳಿಯಲ್ಲಿ, ಮಾನವೀಯತೆಯ ಮಿನುಗುದೀಪಗಳು ತಮ್ಮ ಪಾಡಿಗೆ ತಾವು ಸದ್ದಿಲ್ಲದೆ ಕಾರ್ಯ ನಿರ್ವಹಿಸುತ್ತಿವೆ, ಬೆಳಕು ಹಂಚುತ್ತಿವೆ. ತಮ್ಮ ಚಟುವಟಿಕೆಗಳ ಮೂಲಕ ಸಮಾಜವನ್ನು ಮಾನವೀಯಗೊಳಿಸುವ ಕೆಲಸದಲ್ಲಿ ತೊಡಗಿರುವ ಕರಾವಳಿಯ ಮೂವರು ಮಹಿಳೆಯರ ಅಸಾಧಾರಣ ಜೀವನಚಿತ್ರಗಳು ಇಲ್ಲಿವೆ. ಮಾರ್ಚ್ 8ರ ‘ಮಹಿಳಾ ದಿನ’ದ ಹಿನ್ನೆಲೆಯಲ್ಲಿ ‘ಸುಧಾ’ ಕಾಳಜಿಯಿಂದ ರೂಪಿಸಿರುವ ಕಿರುಚಿತ್ರಗಳು, ಈ ನಾಡಿಗೆ ಜರೂರಾಗಿ ಬೇಕಾದ ಮಾತ್ರ ಮಾದರಿಗಳನ್ನು ನಮ್ಮ ಮುಂದಿಡುತ್ತಿವೆ.





# ಸಾಮಾನ್ಯ ಮಹಿಳೆಯರ ಅಸಾಮಾನ್ಯ ಹೃದ್ಯ ಸಾಹಸ ಕಥನಗಳು